## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1018 (1209) |
| ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |
| ಉತ್ತರಿಸಬೇಕಾದ ದಿನಾಂಕ | 13.03.2026 |
| ಪ್ರಶ್ನೆ | ಉತ್ತರ |
| (ಅ) AI ತಂತ್ರಜ್ಞಾನವು ವೇಗವಾಗಿ ಜಗತ್ತಿನಲ್ಲಿ ವಿಸ್ತರಿಸುತ್ತಿರುವುದರಿಂದ ಕರ್ನಾಟಕ ರಾಜ್ಯದ ಯಾವ ಯಾವ ಕ್ಷೇತ್ರಗಳಲ್ಲಿ ಯಾವ ರೀತಿಯಲ್ಲಿ ಪರಿಣಾಮ ಉಂಟಾಗಬಹುದೆಂಬ ಅಂದಾಜನ್ನು ನಡೆಸಲಾಗಿದೆಯೇ (ವಿವರ ಒದಗಿಸುವುದು); | ಕರ್ನಾಟಕ ಸರ್ಕಾರವು ಕೃತಕ ಬುದ್ಧಿಮತ್ತೆ (AI) ರಾಜ್ಯದ ಆರ್ಥಿಕತೆ ಹಾಗೂ ಸಾರ್ವಜನಿಕ ಸೇವೆಗಳ ರೂಪುರೇಷಗಳನ್ನು ಮಹತ್ವವಾಗಿ ಬದಲಾಯಿಸುತ್ತಿರುವುದನ್ನು ಗುರುತಿಸಿದೆ. AI ಅಳವಡಿಕೆಯ ವೇಗ ಮತ್ತು ವ್ಯಾಪ್ತಿ ಕ್ಷೇತ್ರದಿಂದ ಕ್ಷೇತ್ರಕ್ಕೆ ಬದಲಾಗುತ್ತಿದರೂ, ಬಹುತೇಕ ಎಲ್ಲಾ ಕ್ಷೇತ್ರಗಳಾದ ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್, ಆರೋಗ್ಯ ಮತ್ತು ಜೀವ ವಿಜ್ಞಾನ, ತಯಾರಿಕೆ, ಕೃಷಿ, ಬ್ಯಾಂಕಿಂಗ್ ಮತ್ತು ಹಣಕಾಸು ಸೇವೆಗಳು, ಶಿಕ್ಷಣ, ಮೊಬಿಲಿಟಿ ಮತ್ತು ನಗರ ಮೂಲಸೌಕರ್ಯ, ಚಿಲ್ಲರೆ ವ್ಯಾಪಾರ ಮತ್ತು ಲಾಜಿಸ್ಟಿಕ್ಸ್ ಹಾಗೂ ವೃತ್ತಿಪರ ಸೇವೆಗಳ ಮೇಲೆ ಇದರ ಪರಿಣಾಮ ಕಾಣಸುತ್ತಿವೆ.<br><br>ಈ ಹಿನ್ನೆಲೆಯಲ್ಲಿ, ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಅವಕಾಶಗಳು, ಉದಯೋನ್ಮುಖ ಅಪಾಯಗಳು, ಉದ್ಯೋಗ ಕ್ಷೇತ್ರದ ಮೇಲೆ ಪರಿಣಾಮಗಳು ಹಾಗೂ ಡೇಟಾ ಸಿದ್ಧತೆಯಲ್ಲಿರುವ ಕೊರತೆಗಳನ್ನು ಅರ್ಥಮಾಡಿಕೊಳ್ಳಲು ಇಲಾಖೆಯು **IT Vision Group** ಸದಸ್ಯರಾದ ಪ್ರಮುಖ ಸಂಸ್ಥೆಗಳ CEOs, CIOs ಮತ್ತು CTO ಗಳೊಂದಿಗೆ ಚರ್ಚೆಗಳನ್ನು ನಡೆಸುತ್ತಿದೆ. ಈ ಪರಾಮರ್ಶೆಗಳು ನಿಯಮಿತವಾಗಿ ನಡೆಯುತ್ತಿದ್ದು, ಅವುಗಳಿಂದ ದೊರೆಯುವ ಸೂಚನೆಗಳು ಇಲಾಖೆಗೆ ಕೊರತೆಗಳನ್ನು ಗುರುತಿಸಿ ಪರಿಹರಿಸಲು, ಜವಾಬ್ದಾರಿಯುತ AI ಬಳಕೆಯನ್ನು ಉತ್ತೇಜಿಸಲು ಹಾಗೂ ನವೀನತೆಯನ್ನು ವೇಗಗೊಳಿಸಲು ಸಹಕಾರಿಯಾಗುತ್ತಿವೆ.<br><br>ಈ ಪ್ರಯತ್ನಗಳಿಗೆ ಇನ್ನಷ್ಟು ಮಾರ್ಗದರ್ಶನ ನೀಡುವ ಉದ್ದೇಶದಿಂದ, ಸರ್ಕಾರವು AI, ಕಾನೂನು, ನೀತಿ ಹಾಗೂ ಆಡಳಿತ ಕ್ಷೇತ್ರಗಳ ತಜ್ಞರನ್ನು ಒಳಗೊಂಡ **Responsible AI Committee** ಅನ್ನು ರಚಿಸಿದೆ. ಈ ಸಮಿತಿಯ ಉದ್ದೇಶ ಕೇವಲ ಮೂಲಭೂತ ತತ್ವಗಳನ್ನು ನಿರ್ಧರಿಸುವುದಷ್ಟೇ ಅಲ್ಲದೇ, ವಿವಿಧ ಕ್ಷೇತ್ರಗಳು ಮತ್ತು ಉದ್ಯಮಗಳಿಂದ |

| | |
|---|---|
| | ಉಂಟಾಗುತ್ತಿರುವ ಪ್ರಶ್ನೆಗಳು ಹಾಗೂ ಆತಂಕಗಳನ್ನು ಪ್ರಾಯೋಗಿಕ ಮಾರ್ಗಸೂಚಿಗಳಾಗಿ ಪರಿವರ್ತಿಸುವುದಾಗಿದೆ, ಇದರಿಂದ ಕರ್ನಾಟಕದಲ್ಲಿ ಸುರಕ್ಷಿತ ಹಾಗೂ ವ್ಯಾಪಕ AI ಬಳಕೆಯನ್ನು ಸಾಧ್ಯವಾಗುತ್ತದೆ. ಸಮಿತಿಯು ವಿವಿಧ ಕೈಗಾರಿಕೆಗಳಿಗೆ ಜವಾಬ್ದಾರಿಯುತ AI ಬಳಕೆಗೆ ಸಂಬಂಧಿಸಿದ ನಿಯಮಗಳನ್ನು ಸ್ಪಷ್ಟಪಡಿಸುವುದು, ಹೆಚ್ಚು ಪರಿಣಾಮ ಬೀರುವ ಅನ್ವಯಿಕೆಗಳಿಗೆ ರಕ್ಷಣಾತ್ಮಕ ವ್ಯವಸ್ಥೆಗಳನ್ನು ನಿರ್ಧರಿಸುವುದು, ಕಂಪನಿಗಳು ಅನುಸರಿಸಬಹುದಾದ ಸರಳ ಆಡಳಿತ ವ್ಯವಸ್ಥೆಗಳನ್ನು ರೂಪಿಸುವುದು ಹಾಗೂ ಮಾದರಿ ನೀತಿಗಳು, ಟೆಂಪ್ಲೇಟ್‌ಗಳು ಮತ್ತು ಪ್ರಕ್ರಿಯೆಗಳನ್ನು ಶಿಫಾರಸು ಮಾಡುವುದರ ಮೂಲಕ ವ್ಯವಹಾರಗಳಿಗೆ ಉಂಟಾಗುವ ಅನಿಶ್ಚಿತತೆಯನ್ನು ಕಡಿಮೆ ಮಾಡಲು ಸಹಾಯ ಮಾಡಲಿದೆ. ಇದರ ಮೂಲಕ ಸಮಿತಿಯು ವಿಶಾಲ ತತ್ವಗಳನ್ನು ಪ್ರಾಯೋಗಿಕ ಮಾರ್ಗಸೂಚಿಗಳಾಗಿ ರೂಪಿಸಿ, ಸರ್ಕಾರ ಮತ್ತು ಕೈಗಾರಿಕೆಗಳು AI ಅನ್ನು ಜವಾಬ್ದಾರಿಯುತವಾಗಿ ಹಾಗೂ ಆತ್ಮವಿಶ್ವಾಸದಿಂದ ಅಳವಡಿಸಿಕೊಳ್ಳಲು ನೆರವಾಗಲಿದೆ.<br><br>ಇದರ ಜೊತೆಗೆ, ಇಲಾಖೆಯಿಂದ ಕೈಗಾರಿಕಾ ಕ್ಷೇತ್ರದ ನಾಯಕರೊಂದಿಗೆ ಹಲವು ಚರ್ಚೆಗಳನ್ನು ನಡೆಸಲಾಯಿತು. ವಿಶೇಷವಾಗಿ **ಬೆಂಗಳೂರು ಟೆಕ್ ಸಮ್ಮಿಟ್ (BTS), 2025** ಕಾರ್ಯಕ್ರಮದ ಅಂಗವಾಗಿ **AI Roundtable** ಸಭೆಯನ್ನು ನಡೆಸಿ, ವಿವಿಧ ಕ್ಷೇತ್ರಗಳು ಮತ್ತು ಪ್ರದೇಶಗಳಲ್ಲಿ AI ಅಳವಡಿಕೆಗೆ ಸಂಬಂಧಿಸಿದ ತಳಮಟ್ಟದ ಅಭಿಪ್ರಾಯಗಳನ್ನು ಸಂಗ್ರಹಿಸಿ, ಅನುಸರಿಸಬಹುದಾದ ಮಾರ್ಗಗಳ ಬಗ್ಗೆ ಚರ್ಚಿಸಲಾಯಿತು.<br><br>ಇದರಿಂದ ಕರ್ನಾಟಕವು ತಂತ್ರಜ್ಞಾನಾಧಾರಿತ ಬೆಳವಣಿಗೆಯ ಮುಂದಿನ ಹಂತದಲ್ಲಿಯೂ ಮುಂಚೂಣಿಯಲ್ಲಿ ಉಳಿಯುವುದರ ಜೊತೆಗೆ, AI ಅನ್ನು ಜವಾಬ್ದಾರಿಯುತ, ಸಮಗ್ರ ಮತ್ತು ವ್ಯಾಪಕವಾಗಿ ಬಳಸುವ ಪರಿಸರವನ್ನು ನಿರ್ಮಿಸುವುದು ಸಾಧ್ಯವಾಗುತ್ತದೆ. |
| (ಆ) ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಅಂತರ್ ರಾಷ್ಟ್ರೀಯ AI ಸಮ್ಮೇಳನದಲ್ಲಿ ನಮ್ಮ ರಾಜ್ಯಕ್ಕೆ ಇರುವ Potential ನ್ನೂ ಸರ್ಕಾರ ಯಾವ ರೀತಿಯಲ್ಲಿ ಗುರುತಿಸಿಕೊಂಡು ಬಂದಿದೆ; (ವಿವರ ಒದಗಿಸುವುದು); | 2026ರ ಫೆಬ್ರವರಿ 16 ರಿಂದ 20ರವರೆಗೆ ನವದೆಹಲಿಯಲ್ಲಿ ನಡೆದ India AI Impact Summit ಸಂದರ್ಭದಲ್ಲಿ, ಕರ್ನಾಟಕ ಸರ್ಕಾರವು ರಾಜ್ಯದ ನವೀನತೆ, ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವ ತನ್ನ ಬದ್ಧತೆಯನ್ನು ಪ್ರದರ್ಶಿಸಲು ವಿಶೇಷ Karnataka Pavilion ಅನ್ನು ಸ್ಥಾಪಿಸಿತು. ರಾಜ್ಯದ ವಿವಿಧ ನೀತಿಗಳು ಮತ್ತು ಪ್ರೋತ್ಸಾಹಕ ಯೋಜನೆಗಳ ಜೊತೆಗೆ, ಈ ಪೆವಿಲಿಯನ್‌ನಲ್ಲಿ ಕರ್ನಾಟಕದ ಐದು AI ಆಧಾರಿತ ಸ್ಟಾರ್ಟ್‌ಅಪ್‌ಗಳನ್ನು— Neuralix AI, Synchrovox AI, Pump Academy, Janitri Innovations ಮತ್ತು Niramai Health —ಪ್ರದರ್ಶಿಸಲಾಯಿತು. ಈ ಸ್ಟಾರ್ಟ್‌ಅಪ್‌ಗಳಿಗೆ ತಮ್ಮ ಪರಿಹಾರಗಳನ್ನು ಪ್ರಸ್ತುತಪಡಿಸಲು, ಜಾಗತಿಕ ಉದ್ಯಮ ನಾಯಕರೊಂದಿಗೆ ಸಂವಾದ ನಡೆಸಲು ಹಾಗೂ ವಿಶಾಲ AI ಪರಿಸರದಲ್ಲಿ ತಮ್ಮ ಗುರುತನ್ನು ಬಲಪಡಿಸಲು ರಾಷ್ಟ್ರೀಯ ಮಟ್ಟದ |

ವೇದಿಕೆಯನ್ನು ಒದಗಿಸಲಾಯಿತು.

ಸಮ್ಮೇಳನದ ವೇಳೆ, ಕರ್ನಾಟಕ ಸರ್ಕಾರದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು Anthropic ಸಂಸ್ಥೆಯ ಸಹ ಸಂಸ್ಥಾಪಕ ಮತ್ತು ಸಿಇಒ Dario Amodei ಹಾಗೂ ಅವರ ಹಿರಿಯ ನೇತೃತ್ವ ತಂಡದ ಸದಸ್ಯರನ್ನು ಭೇಟಿಯಾಗಿ ಜವಾಬ್ದಾರಿಯುತ AI, ಡಿಜಿಟಲ್ ಆಡಳಿತ, ಡೇಟಾ ಸ್ವಾಯತ್ತತೆ ಮತ್ತು ಪ್ರತಿಭಾ ಅಭಿವೃದ್ಧಿ ಮುಂತಾದ ವಿಷಯಗಳ ಕುರಿತು ಅಭಿಪ್ರಾಯ ವಿನಿಮಯ ನಡೆಸಿದರು. ಕರ್ನಾಟಕದಲ್ಲಿ ಜವಾಬ್ದಾರಿಯುತ ಹಾಗೂ ಜಾಗತಿಕವಾಗಿ ಸ್ಪರ್ಧಾತ್ಮಕ AI ಪರಿಸರವನ್ನು ಬಲಪಡಿಸುವ ದಿಕ್ಕಿನಲ್ಲಿ ಮುಂದಿನ ಸಹಕಾರದ ಬಗ್ಗೆ ಎರಡೂ ಪಕ್ಷಗಳು ಆಸಕ್ತಿ ವ್ಯಕ್ತಪಡಿಸಿವೆ.

ಸಮ್ಮೇಳನದ ಅಂಗವಾಗಿ, ಕರ್ನಾಟಕ ಸರ್ಕಾರವು ಯುನೈಟೆಡ್ ಕಿಂಗ್‌ಡಮ್, ಇಟಲಿ, ಅಮೆರಿಕಾ ಮತ್ತು ಫ್ರಾನ್ಸ್ ದೇಶಗಳ ಪ್ರತಿನಿಧಿ ಮಂಡಳಿಗಳೊಂದಿಗೆ ಸಭೆಗಳನ್ನು ನಡೆಸಿತು. ಈ ಚರ್ಚೆಗಳು ಕೇವಲ ಕೃತಕ ಬುದ್ಧಿಮತ್ತೆಗೆ ಮಾತ್ರ ಸೀಮಿತವಾಗದೆ, ಕ್ವಾಂಟಮ್ ತಂತ್ರಜ್ಞಾನಗಳು, ಉದಯೋನ್ಮುಖ ತಂತ್ರಜ್ಞಾನ ಸಂಶೋಧನೆ, ಮಷೀನ್ ಲರ್ನಿಂಗ್ ಹಾಗೂ ಭವಿಷ್ಯದ ಜಾಗತಿಕ ಸಾಮರ್ಥ್ಯ ಕೇಂದ್ರ (GCC)ಕ್ಕೆ ಸಂಬಂಧಿತ ಅವಕಾಶಗಳು ಸೇರಿದಂತೆ ಡೀಪ್-ಟೆಕ್ ಕ್ಷೇತ್ರಗಳಿಗೂ ವಿಸ್ತರಿಸಿತು.

ಈ ಸಭೆಗಳ ಸಂದರ್ಭದಲ್ಲಿ ಕರ್ನಾಟಕ ಪ್ರತಿನಿಧಿ ಮಂಡಳಿಯು ಜಾಗತಿಕ ಸಾಮರ್ಥ್ಯ ಕೇಂದ್ರ (GCC) ಗಳು, ಸಣ್ಣ ಮತ್ತು ಮಧ್ಯಮ ಉದ್ಯಮಗಳು (SMEs), ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳು ಸೇರಿದಂತೆ 50ಕ್ಕೂ ಹೆಚ್ಚು ಸಂಸ್ಥೆಗಳೊಂದಿಗೆ ಸಂವಾದ ನಡೆಸಿತು. ಈ ಸಮ್ಮೇಳನದಲ್ಲಿ ಭಾಗವಹಿಸಿದ ಅನೇಕರು ಕರ್ನಾಟಕದ ನವೀನತೆ ಪರಿಸರದ ಮೇಲೆ ವಿಶೇಷ ಆಸಕ್ತಿ ವ್ಯಕ್ತಪಡಿಸಿದರು, ವಿಶೇಷವಾಗಿ ರಾಜ್ಯದಲ್ಲಿರುವ ಬಲವಾದ AI ಮತ್ತು ಡಿಜಿಟಲ್ ಪ್ರತಿಭಾ ಸಂಪತ್ತನ್ನು ಗಮನಿಸಿದರು. ಹಲವಾರು ಸಂಸ್ಥೆಗಳು Beyond Bengaluru ಪ್ರದೇಶಗಳತ್ತವೂ ಆಸಕ್ತಿ ತೋರಿದ್ದು, ಸಂಶೋಧನಾ ಸಹಭಾಗಿತ್ವ, ಸಹ-ನವೀನತಾ ಕಾರ್ಯಕ್ರಮಗಳು ಮತ್ತು ಶೈಕ್ಷಣಿಕ ಸಹಕಾರಗಳ ಕುರಿತು ಚರ್ಚೆಗಳು ಆರಂಭಗೊಂಡಿವೆ.

ಇದಲ್ಲದೆ, Jan AI Pavilion ಕುರಿತಾಗಿ ವಿಶೇಷವಾಗಿ ಉಲ್ಲೇಖಿಸಬಹುದು. ಇದು AI ಬಳಕೆಯ ಉದಾಹರಣೆಗಳು, ಸಮುದಾಯದ ಮೇಲೆ ಪರಿಣಾಮ, ಸಹಕಾರ ಮತ್ತು ಸಂಯುಕ್ತ ಅಧ್ಯಯನದ ಬಗ್ಗೆ ಚರ್ಚೆಗಳಿಗೆ ಕೇಂದ್ರವಾಗಿತ್ತು. ಈ ಪೆವಿಲಿಯನ್ AI ತಂತ್ರಜ್ಞಾನವನ್ನು ಗ್ರಾಮೀಣ ಮತ್ತು ಸಣ್ಣ ಪಟ್ಟಣಗಳಿಗೂ ಸುಲಭವಾಗಿ ಲಭ್ಯವಾಗುವಂತೆ ಮಾಡುವುದು Jan AIಯ ಉದ್ದೇಶವನ್ನು ಪ್ರತಿಬಿಂಬಿಸಿತು. ಇದರಲ್ಲಿ UN Women, MagicBus, Dhwani, Hebbale, Neutrinos ಹಾಗೂ ಕರ್ನಾಟಕದ OneTAC ಮತ್ತು EkStep ಸೇರಿದಂತೆ ಹಲವು ಸಂಸ್ಥೆಗಳು ಭಾಗವಹಿಸಿ, ಸ್ಥಳೀಯ

| | |
|---|---|
| | ಭಾಷೆಯ ಆಧಾರಿತ, ವಿಶ್ವಾಸಪೂರ್ಣ ಮತ್ತು ಜನಸಾಮಾನ್ಯರಿಗೆ ಉಪಯುಕ್ತವಾಗುವ AI ಸಾಧನಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಮಾಡುತ್ತಿರುವುದನ್ನು ಪ್ರದರ್ಶಿಸಿವೆ.<br><br>ಈ ಚರ್ಚೆಗಳ ಫಲವಾಗಿ ಹಲವು ಸಹಕಾರದ ಸಾಧ್ಯತೆಗಳು ಹೊರಹೊಮ್ಮಿವೆ. ವಿದ್ಯುನ್ಮಾನ, ಐಟಿ ಮತ್ತು ಬಿಟಿ ಇಲಾಖೆ ವಿಶೇಷ AI ಮತ್ತು ಕ್ವಾಂಟಮ್ ಸಂಶೋಧನಾ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸುವುದು, ಪಾಲುದಾರ ರಾಷ್ಟ್ರಗಳೊಂದಿಗೆ ದ್ವಿಪಕ್ಷೀಯ ಪ್ರತಿಭಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದುವರಿಸುವುದು ಹಾಗೂ ಡೀಪ್-ಟೆಕ್ ಮತ್ತು ಆಧುನಿಕ ಇಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಸಹ-ವಿಕಸನ ಮಾರ್ಗಗಳನ್ನು ಸೃಷ್ಟಿಸುವ ಅವಕಾಶಗಳನ್ನು ಪರಿಶೀಲಿಸಲಿದೆ. Beyond Bengaluru ಪ್ರದೇಶದ ಬಗ್ಗೆ ವ್ಯಕ್ತವಾದ ಆಸಕ್ತಿ, ವಿತರಣಾತ್ಮಕ ನವೀನತಾ ಕೇಂದ್ರಗಳು, ಭವಿಷ್ಯದ ಜಾಗತಿಕ ಸಾಮರ್ಥ್ಯ ಕೇಂದ್ರ (GCC) ಹೂಡಿಕೆಗಳು ಮತ್ತು ಸಂಯುಕ್ತ ಸಂಶೋಧನೆ ಹಾಗೂ ಅಭಿವೃದ್ಧಿ ಸೌಲಭ್ಯಗಳ ಸ್ಥಾಪನೆಗೆ ಹೊಸ ಅವಕಾಶಗಳನ್ನು ಸೂಚಿಸುತ್ತದೆ. ಇದರಿಂದ ಕರ್ನಾಟಕವು ಉದಯೋನ್ಮುಖ ತಂತ್ರಜ್ಞಾನಗಳ ಕ್ಷೇತ್ರದಲ್ಲಿ ದೀರ್ಘಕಾಲಿಕ ನಾಯಕತ್ವವನ್ನು ಸಾಧಿಸಲು ಸಹಾಯವಾಗಲಿದೆ. |
| (ಇ) ರಾಜ್ಯದಲ್ಲಿ AI ತಂತ್ರಜ್ಞಾನವನ್ನು ಯುವ ಪೀಳಿಗೆಗೆ ಪರಿಚಯಿಸಿ ಈಗಾಗಲೇ ಐಟಿ ಕ್ರಾಂತಿ ಉಂಟಾದಂತೆ AI ಕ್ಷೇತ್ರದಲ್ಲೂ ಸ್ಥಾಪಿಸಲು ಸರ್ಕಾರದ ಮುಂದಿರುವ ಆಲೋಚನೆಗಳೇನು? (ವಿವರ ಒದಗಿಸುವುದು) | ರಾಜ್ಯದಲ್ಲಿ AI ತಂತ್ರಜ್ಞಾನವನ್ನು ಯುವ ಪೀಳಿಗೆಗೆ ಪರಿಚಯಿಸಿ ಈಗಾಗಲೇ ಐಟಿ ಕ್ರಾಂತಿ ಉಂಟಾದಂತೆ AI ಕ್ಷೇತ್ರದಲ್ಲೂ ಸ್ಥಾಪಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:-<br><br>1. ಕರ್ನಾಟಕ ಸರ್ಕಾರವು ಕೃತಕ ಬುದ್ಧಿಮತ್ತೆ (AI) ಸೇರಿದಂತೆ ಉದಯೋನ್ಮುಖ ತಂತ್ರಜ್ಞಾನಗಳಿಗೆ ಸಂಬಂಧಿಸಿದ ಕೌಶಲ್ಯಗಳನ್ನು ಯುವ ಪೀಳಿಗೆಗೆ ಕಲಿಸುವುದಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದೆ. ರಾಜ್ಯವ್ಯಾಪಿ NIPUNA ಕಾರ್ಯಕ್ರಮ, ವಿವಿಧ ಡಿಜಿಟಲ್ ಕೌಶಲ್ಯಾಭಿವೃದ್ಧಿ ಮಿಷನ್‌ಗಳು ಹಾಗೂ ಉದ್ಯಮ ಸಹಭಾಗಿತ್ವಗಳ ಮೂಲಕ, ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಯುವಕರು ತಾಂತ್ರಿಕ ಸಾಮರ್ಥ್ಯಗಳನ್ನು ವ್ಯಾಪಕವಾಗಿ ಅಭಿವೃದ್ಧಿಪಡಿಸಲು ಸರ್ಕಾರ ಈಗಾಗಲೇ ಅವಕಾಶಗಳನ್ನು ಒದಗಿಸುತ್ತಿದೆ.<br><br>2. ಪ್ರಮುಖ ತಂತ್ರಜ್ಞಾನ ಸಹಭಾಗಿತ್ವದೊಂದಿಗೆ ಸ್ಥಾಪಿಸಲಾದ Centres of Excellence (CoEs)- AI & QAIC ಹಲವು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಅನುಭವ, ನೈಜ ಜಗತ್ತಿನ AI ಅನ್ವಯಿಕೆಗಳ ಪರಿಚಯ ಹಾಗೂ ನವೀನತೆ ಸವಾಲುಗಳು, ಯೋಜನೆಗಳು ಮತ್ತು ಹ್ಯಾಕಥಾನ್‌ಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ನೀಡುತ್ತಿದೆ.<br><br>3. A I ಕೌಶಲ್ಯಾಭಿವೃದ್ಧಿ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಾಗದಂತೆ ಹಾಗೂ ರಾಜ್ಯದ ಇತರ ಪ್ರದೇಶಗಳಿಗೂ ವಿಸ್ತರಿಸಲು, ಸರ್ಕಾರವು LEAP ಕಾರ್ಯಕ್ರಮದ ಮೂಲಕ |

| | |
|---|---|
| | C o E ಮೂಲಸೌಕರ್ಯವನ್ನು ರಾಜ್ಯದ ವಿವಿಧ ಭಾಗಗಳಿಗೆ ವಿಸ್ತರಿಸುತ್ತಿದೆ. ಇದರಿಂದ ಜಿಲ್ಲೆಗಳ ವಿದ್ಯಾರ್ಥಿಗಳಿಗೆ ಆಧುನಿಕ ಉಪಕರಣಗಳು, ತರಬೇತಿ ಪ್ರಯೋಗಾಲಯಗಳು ಮತ್ತು ಉದ್ಯಮ ಮಾರ್ಗದರ್ಶನದ ಅವಕಾಶಗಳು ಲಭ್ಯವಾಗುತ್ತಿವೆ. ಈ ಎಲ್ಲಾ ಮುಂದಾಳತ್ವಗಳು ಒಟ್ಟಾಗಿ ಯುವ ವಿದ್ಯಾರ್ಥಿಗಳು AI ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು, ಉಪಕರಣಗಳನ್ನು ಪ್ರಯೋಗಾತ್ಮಕವಾಗಿ ಬಳಸಲು ಹಾಗೂ ಭವಿಷ್ಯದ ಉದ್ಯೋಗಗಳಿಗೆ ಅಗತ್ಯವಾದ ಸಮಸ್ಯೆ ಪರಿಹಾರ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಅನುಕೂಲಕರ ಪರಿಸರವನ್ನು ನಿರ್ಮಿಸುತ್ತವೆ.<br><br>4. ಸರ್ಕಾರವು ಜವಾಬ್ದಾರಿಯುತ ಕೃತಕ ಬುದ್ಧಿಮತ್ತೆ ಸಮಿತಿ (Responsible AI Committee) ಯನ್ನು ರಚಿಸಿದೆ. ಈ ಸಮಿತಿಯಲ್ಲಿ ಶೈಕ್ಷಣಿಕ ವಲಯ, ಉದ್ಯಮ, ಕಾನೂನು ಕ್ಷೇತ್ರ ಹಾಗೂ ಸರ್ಕಾರಿ ಸಂಸ್ಥೆಗಳ ತಜ್ಞರು ಸದಸ್ಯರಾಗಿದ್ದು, ಕರ್ನಾಟಕದ A I ತಂತ್ರವನ್ನು ಮಾರ್ಗದರ್ಶಿಸುವುದು, ನೈತಿಕ ಮತ್ತು ಜವಾಬ್ದಾರಿಯುತ AI ಚೌಕಟ್ಟುಗಳನ್ನು ರೂಪಿಸುವುದು ಹಾಗೂ ಯುವಕರಿಗಾಗಿ AI ಕೌಶಲ್ಯಾಭಿವೃದ್ಧಿಗೆ ಸಂಬಂಧಿಸಿದ ಉದ್ದೇಶಿತ ಕ್ರಮಗಳನ್ನು ಶಿಫಾರಸ್ಸು ಮಾಡುವ ಜವಾಬ್ದಾರಿ ನೀಡಲಾಗಿದೆ. ಇದರ ಪ್ರಮುಖ ಆದ್ಯತೆಯೊಂದಾಗಿ ಶಾಲಾ ಮತ್ತು ಉನ್ನತ ಶಿಕ್ಷಣ ಪಠ್ಯಕ್ರಮಗಳಲ್ಲಿ AI ಅನ್ನು ಹಂತ ಹಂತವಾಗಿ ಅಳವಡಿಸುವುದು, ಜೊತೆಗೆ ಶಾಲಾ ಶಿಕ್ಷಕರು, ಕಾಲೇಜು ಪ್ರಾಧ್ಯಾಪಕರು ಮತ್ತು ಅಧ್ಯಾಪಕರಿಗೆ ಸಂರಚಿತ ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದು ಸೇರಿದೆ. ಇದರಿಂದ ವಿದ್ಯಾರ್ಥಿಗಳು AI ಮೂಲಭೂತಗಳನ್ನು ಜವಾಬ್ದಾರಿಯುತ ಮತ್ತು ಪ್ರಾಯೋಗಿಕ ರೀತಿಯಲ್ಲಿ ಕಲಿಯುವ ಅವಕಾಶ ಪಡೆಯುತ್ತಾರೆ.<br><br>ಈ ರೀತಿಯಲ್ಲಿ ಅಭಿವೃದ್ಧಿಯನ್ನು ಮುನ್ನಡೆಸುವುದರ ಮೂಲಕ, ಯುವಕರು ನವೀನತೆಯನ್ನು ಮುನ್ನಡೆಸುವ ಪರಿಸರವನ್ನು ನಿರ್ಮಿಸಿ ಕರ್ನಾಟಕವನ್ನು ಜಾಗತಿಕ AI ವಲಯದಲ್ಲಿ ಮುಂಚೂಣಿಯಲ್ಲಿರಿಸಲು ಸರ್ಕಾರ ಪ್ರಯತ್ನಿಸುತ್ತಿದೆ. |

(ಐಟಿಬಿಟಿ 28 ಎಲ್‌ಸಿಎಂ 2026)

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.